**ಕರ್ನಾಟಕ ಸರ್ಕಾರ**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: DTE-ADMIOEST(3)/15/2022

ಆಯುಕ್ತರ ಕಚೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು 01,ದಿನಾಂಕ: 21.12.2024

**ಕಾರಣ ಕೇಳುವ ನೋಟೀಸ್**

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಮುಖಾಂತರ ಕಾರ್ಯನಿರ್ವಹಿಸುತ್ತಿರುವ ಡಿ-ಗ್ರೂಪ್ ಸಿಬ್ಬಂದಿಗಳ ಹಾಜರಾತಿಯನ್ನು Aadhar Enabled Biometric Attendance System (AEBAS) ರಲ್ಲಿ ನಿರ್ವಹಿಸದಿರುವ ಕುರಿತು.

**ಉಲ್ಲೇಖ:**
1. ಈ ಕಛೇರಿ ಕಾರ್ಯಾದೇಶ ಸಂಖ್ಯೆ: ಡಿಟಿಇ 42 ಇಎಸ್‌ಟಿ(3) 2017, ದಿ: 21.7.2018
2. ಈ ಕಛೇರಿ ಜ್ಞಾಪನ ಸಂಖ್ಯೆ: DTE-ADMIOEST(3)/15/2020/423, ದಿ: 25.6.2024
3. ಈ ಕಛೇರಿ ಅಧಿಸೂಚನೆ ಸಂಖ್ಯೆ: DTE-ADMIOEST(3)/15/2020/464, ದಿನಾಂಕ: 02.07.2024.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸಂಸ್ಥೆಗಳಲ್ಲಿ ಖಾಲಿಯಿರುವ ಗ್ರೂಪ್-ಡಿ(ಕಛೇರಿ / ಕಾರ್ಯಾಗಾರ) ಹುದ್ದೆಗೆದುರಾಗಿ ಹೊರಗುತ್ತಿಗೆ ಆಧಾರದ ಮೇರೆಗೆ ಸಿಬ್ಬಂದಿಗಳ ಸೇವೆಯನ್ನು ಒದಗಿಸಲು ಮಾನವ ಸಂಪನ್ಮೂಲ ಏಜೆನ್ಸಿಯಾದ ಮ|| ಆಬ್ಜೇಕ್ಸ್ ಟೆಕ್ನಾಲಜೀಸ್, ಬೆಂಗಳೂರು / ಮ|| ಮಾತಾ ಟೆಕ್ನಾಲಜೀಸ್, ದಾರವಾಡ ಇವರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ.

ಉಲ್ಲೇಖ(2) ರ ಜ್ಞಾಪನದಲ್ಲಿ ಕಛೇರಿ / ಸಂಸ್ಥೆಗಳಲ್ಲಿ ಖಾಲಿಯಿರುವ ಗ್ರೂಪ್-ಡಿ ಹುದ್ದೆಗೆದುರಾಗಿ ಹೊರಗುತ್ತಿಗೆ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಗ್ರೂಪ್-ಡಿ ಸಿಬ್ಬಂದಿಗಳ ವೈಯಕ್ತಿಕ ವಿವರಗಳನ್ನು ಸಹ ಕಡ್ಡಾಯವಾಗಿ Aadhar Enabled Biometric Attendance System (AEBAS) ರಲ್ಲಿ ದಿನಾಂಕ: 30.06.2024 ರೊಳಗೆ ನೊಂದಾಯಿಸಿ, AEBAS ತಂತ್ರಾಂಶದ ಮೂಲಕ ದಿನಾಂಕ: 01.07.2024 ರಿಂದ ಕಡ್ಡಾಯವಾಗಿ ಹಾಜರಾತಿಯನ್ನು ದಾಖಲಿಸಲು ಕ್ರಮವಹಿಸಲು ಸೂಚಿಸಲಾಗಿತ್ತು.

ಉಲ್ಲೇಖ(3) ರ ಅಧಿಸೂಚನೆಯ ಕಂಡಿಕೆ(3) ರಲ್ಲಿ ಒಂದು ವೇಳೆ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಹಾಜರಾತಿಯನ್ನು AEBAS ತಂತ್ರಾಂಶದಲ್ಲಿ ನಿರ್ವಹಿಸದಿದ್ದರೆ ಸದರಿ ಸಿಬ್ಬಂದಿಗಳ ವೇತನವನ್ನು ಪಾವತಿಸುವುದಿಲ್ಲ ಹಾಗೂ ಮುಂದಿನ ಆಗು ಹೋಗುಗಳಿಗೆ ಸಂಬಂಧಪಟ್ಟವರೇ ಜವಾಬ್ದಾರರಾಗಿರುತ್ತಾರೆ. AEBAS ತಂತ್ರಾಂಶದಲ್ಲಿ ದಾಖಲಾಗಿರುವ ಹಾಜರಾತಿಯ ಮಾಹಿತಿಯಂತೆ ಸಿಬ್ಬಂದಿಗಳ ವೇತನವನ್ನು ಪಾವತಿಸಲಾಗುವುದು ಎಂದು ಸೂಚಿಸಿದ್ದರೂ ಸಹ ತಾವು ಸದರಿ ನಿರ್ದೇಶನವನ್ನು ಪಾಲಿಸದೇ ಇರುವುದು ಕಂಡುಬಂದಿರುತ್ತದೆ. ಈ ಸಂಬಂಧ ಸೂಕ್ತ

...2

CS CamScanner

ವಿವರಣೆಯನ್ನು07 ದಿನಗಳೊಳಗಾಗಿ ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ನಿಮ್ಮ ಹೇಳಿಕೆ ಏನು ಇಲ್ಲವೆಂದು ಭಾವಿಸಿ ನಿಯಮಾನುಸಾರ ಶಿಸ್ತು ಕ್ರಮಕೈಗೊಳ್ಳಲು ಕ್ರಮವಹಿಸಲಾಗುವುದೆಂದು ಸೂಚಿಸಿದೆ.

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

**ಇವರಿಗೆ:-**

1. ಪ್ರಾಂಶುಪಾಲರು, ಎಸ್.ಜೆ ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು ಮತ್ತು ಎಸ್.ಜೆ (ಸಂಜೆ) ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು
2. ಸರ್ಕಾರಿ ಪಾಲಿಟೆಕ್ನಿಕ್, ಅರಕೇರಾ, ರಾಯಚೂರು
3. ಸರ್ಕಾರಿ ಪಾಲಿಟೆಕ್ನಿಕ್, ಹೊಳೆಆಲೂರು
4. ಸರ್ಕಾರಿ ಪಾಲಿಟೆಕ್ನಿಕ್, ಸದಲಗ
5. ಸರ್ಕಾರಿ ಪಾಲಿಟೆಕ್ನಿಕ್,ತರೀಕೆರೆ
6. ಸರ್ಕಾರಿ ಪಾಲಿಟೆಕ್ನಿಕ್,ಬ್ಯಾಡಿಗಿ
7. ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಕಮಡೊಹಳ್ಳಿ
8. ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಪಿರಿಯಾಪಟ್ಟಣ

**ಪ್ರತಿ:-**

ಕಡತಕ್ಕೆ.

CamScanner